ಕೇಂದ್ರ ಸರ್ಕಾರದೊಂದಿಗಿನ ಚರ್ಚೆಯು ನಿರ್ಣಾಯಾತ್ಮಕ ಹಂತವನ್ನು ಮುಟ್ಟಿದೆ ಮತ್ತು ಈ ಕೆಳಗಿನವುಗಳ ಬಗ್ಗೆ ಅಂತಿಮ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ

1 ರಿಯಾಯಿತಿ ಒಪ್ಪಂದ

2 ರಕ್ಷಣಾ ಮಂತ್ರಾಲಯದಿಂದ ನಿರಾಕ್ಷೇಪಣೆ ಪತ್ರ

3 ಸಂಯೋಜಿತ ವಾಯುಪಥದ ನಿರ್ವಹಣಾ ಒಪ್ಪಂದ

4 ನಾಗರೀಕ ವಿಮಾನ ಯಾನ ಮಹಾ ನಿರ್ದೇಶಕರಿಂದ ನಿವೇಶನದ ಅನುಮೋದನೆ

5 ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಭೂ ಸ್ವಾಧೀನವು ಪೂರ್ಣಗೊಂಡಿದೆ ಭೂ ಗುತ್ತಿಗೆ ಒಪ್ಪಂದ ಮತ್ತು ರಾಜ್ಯದ ಒತ್ತಾಸೆ ಒಪ್ಪಂದವು ಮುಗಿದಿದೆ

6 ಯೋಜನೆ ಕಾರ್ಯತತ್ವರತೆಯ ಐಸಿಐಸಿಐ ಬ್ಯಾಂಕಿನಿಂದ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ

ಆ) 2004ರ ಜನವರಿ ಅಂತ್ಯಕ್ಕೆ ಭಾರತ ಸರ್ಕಾರದಿಂದ ರಿಯಾಯಿತಿ ಒಪ್ಪಂದಕ್ಕೆ ರಕ್ಷಣಾ ಮಂತ್ರಾಲಯದಿಂದ ನಿರಾಕ್ಷೇಪಣಾ ಪತ್ರಕ್ಕೆ ನಾಗರೀಕ ವಿಮಾನ ಯಾನ ಮಹಾ ನಿರ್ದೇಶಕರಿಂದ ನಿವೇಶನದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ ಅದಾದ ತರುವಾಯ 2–3 ವಾರದೊಳಗೆ ಹಣಕಾಸಿನ ಮುಕ್ತಾಯವು ನೆರವೇರಲಿದೆ ಇದನ್ನು ಆಧರಿಸಿ, 2004ರ ಫೆಬ್ರವರಿ ಮಧ್ಯದಿಂದ ನಿವೇಶನದ ಬಳಿ ಯೋಜನೆಯ ಕೆಲಸವು ಪ್ರಾರಂಭವಾಗುವುದನ್ನು ನಿರೀಕ್ಷಿಸಲಾಗಿದೆ

ಇ) ದಿನಾಂಕ 1 12 2003ರಂದು ಇದ್ದಂತೆ ರಾಜ್ಯ ಸರ್ಕಾರವು ನೇರವಾಗಿ ಯೋಜನೆಯ ಮೇಲೆ ರೂ 68,125 ಕೋಟಿಗಳ ವೆಚ್ಚವನ್ನು ಮಾಡಿದೆ ಇದರ ಜೊತೆಗೆ ಯೋಜನೆಗೆ ಸಂಭಂಧಿಸಿದ ಇತರೆ ಬಾಬುಗಳ ಮೇಲೆ ಮತ್ತು ಭೂ ಸ್ವಾಧೀನಕ್ಕಾಗಿ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಬಂಡವಾಳ ಅಭಿವೃದ್ಧಿ ನಿಗಮವು ರೂ 125–00 ಕೋಟಿಗಳ ವೆಚ್ಚವನ್ನು ಮಾಡಿದೆ

ರಾಜ್ಯದಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ

239 (85) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002ನೇ ಇಸವಿಯಿಂದ ಇಲ್ಲಿಯವರೆವಿಗೆ ರಾಜ್ಯದಲ್ಲಿ ಹೊಸದಾಗಿ ಎಷ್ಟು ವಿದ್ಯಾರ್ಥಿ ನಿಲಯಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಾರಂಭಿಸಲಾಗಿದೆ

ಆ) ಮೇಲ್ಕಂಡ ಅವಧಿಯಲ್ಲಿ ಎಷ್ಟು ಹೊಸ ಕಟ್ಟಡಗಳನ್ನು ವಿದ್ಯಾರ್ಥಿನಿಲಯಗಳಿಗಾಗಿ ನಿರ್ಮಿಸಲಾಗಿದೆ

ಇ) ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಮೇಲ್ಕಂಡ ಅವಧಿಯಲ್ಲಿ ಎಷ್ಟು ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ ಹಾಗೂ ಎಷ್ಟು ಹೊಸ ಕಟ್ಟಡಗಳನ್ನು ನಿರ್ಮಿಸಲಾಗಿದೆ?

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 1 ಸಮಾಜ ಕಲ್ಯಾಣ ಇಲಾಖೆ

ಇಲ್ಲ

2 ಪರಿಶಿಷ್ಟ ವರ್ಗಗಳ ಇಲಾಖೆ

1 ಮೆಟ್ರಿಕ್ ಪೂರ್ವ ಬಾಲಕರ ವಿ ನಿ	–	10
2 ಮೆಟ್ರಿಕ್ ಪೂರ್ವ ಬಾಲಕಿಯರ ವಿ ನಿ	–	03
		03

3 ಹಿಂದುಳಿದ ವರ್ಗಗಳ ಇಲಾಖೆ

– – –

4 ಅಲ್ಪಸಂಖ್ಯಾತರ ಇಲಾಖೆ

– – –

ಆ) 1 ಸಮಾಜ ಕಲ್ಯಾಣ ಇಲಾಖೆ

2002–03ನೇ ಸಾಲಿನ	–	51 ವಿ ನಿ ಗಳು
2003–04ನೇ ಸಾಲಿನ ಡಿಸೆಂಬರ್	–	44 ವಿ ನಿ ಗಳ ಕಟ್ಟಡಗಳನ್ನು ನಿರ್ಮಿಸಲಾಗಿದೆ
ಒಟ್ಟು		95

2 ಪರಿಶಿಷ್ಟ ವರ್ಗಗಳ ಇಲಾಖೆ

2002–03ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 7 ವಿದ್ಯಾರ್ಥಿನಿಲಯಗಳ ಕಟ್ಟಡವನ್ನು ನಿರ್ಮಿಸಲಾಗಿದೆ

3 ಹಿಂದುಳಿದ ವರ್ಗಗಳ ಇಲಾಖೆ

– – –

4 ಅಲ್ಪಸಂಖ್ಯಾತರ ಇಲಾಖೆ

– – –

ಇ) ಸಮಾಜ ಕಲ್ಯಾಣ ಇಲಾಖಾವತಿಯಿಂದ ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಯಾವುದೇ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿರುವುದಿಲ್ಲ

ರಾಜ್ಯದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆ

240 (86) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಎಷ್ಟು

ಆ) ಇವುಗಳಲ್ಲಿ ಎಷ್ಟು ಸಾರ್ವಜನಿಕ ವಲಯಗಳಲ್ಲಿವೆ

ಇ) ಇವುಗಳಲ್ಲಿ ಸರ್ಕಾರ ತೊಡಗಿಸಿರುವ ಬಂಡಾವಾಳವೆಷ್ಟು

ಈ) ಇವುಗಳ ಪೈಕಿ ಎಷ್ಟು ಲಾಭದಲ್ಲಿ ನಡೆಯುತ್ತಿವೆ

ಉ) ಎಷ್ಟು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ನಷ್ಟವನ್ನು ಅನುಭವಿಸುತ್ತಿವೆ ಹಾಗೂ ಮುಚ್ಚಲ್ಪಟ್ಟಿವೆ

ಊ) ರಾಜ್ಯದಲ್ಲಿ ಈ ಕೈಗಾರಿಕೆಗಳಲ್ಲಿ ಎಷ್ಟು ಜನ ಉದ್ಯೋಗಸ್ಥರಾಗಿದ್ದಾರೆ